ಪ್ರಮಾಣ ವಚನ ಬೋಧಿಸಿದ ದಿನಾಂಕಃ **10.03.2026.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

<u>**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎ.ಎನ್.ಎಲ್. ವಕೀಲರಿಂದ**</u>

ನಾನು ಈ ದಿನ ನನ್ನ ಪರವಾಗಿ ಮಾತ್ರ ಸಾಕ್ಷಿ ಹೇಳುತ್ತಿದ್ದೇನೆ. ನಾನು **1, 7** ಮತ್ತು **10**ನೇ ಪ್ರತಿವಾದಿಯ ಪರವಾಗಿ ಸಾಕ್ಷಿ ಹೇಳುತ್ತಿಲ್ಲ. ಸುಬ್ಬಣ್ಣನವರು ಮೃತಪಡುವ ಮೊದಲು ಒಟ್ಟು ಕುಟುಂಬದ ಸಂಪೂರ್ಣ ಜವಾಬ್ದಾರಿಯನ್ನು ಅವರೇ ತೆಗೆದುಕೊಂಡಿದ್ದರು ಎಂದರೆ ಸರಿ. ಪತ್ರ ವ್ಯವಹಾರವೆಲ್ಲ ಸುಬ್ಬಣ್ಣನವರೇ ಮಾಡುತ್ತಿದ್ದರು ಎಂದರೆ ಸರಿ. ಸರ್ವೆ ನಂ.**39**ರಲ್ಲಿ **6** ಎಕರೆ **15** ಗುಂಟೆ ಖಾತೆಯು ಸುಬ್ಬಣ್ಣನವರ ಹೆಸರಿನಲ್ಲಿ ಇತ್ತು ಎಂದರೆ ಗೊತ್ತಿಲ್ಲ. ಸಾಕ್ಷಿಗೆ ನಿ.ಪಿ.**48** ಪಹಣಿಯನ್ನು ತೋರಿಸಿ ಅದರಲ್ಲಿ ಸರ್ವೆ ನಂ.**39**ರಲ್ಲಿ **6** ಎಕರೆ **15** ಗುಂಟೆ ಖಾತೆಯು ಸುಬ್ಬಣ್ಣನವರ ಹೆಸರಿನಲ್ಲಿ ಇದೆ ಎಂದು ಕೇಳಿದಾಗ ಸಾಕ್ಷಿಯು ಇರಬಹುದು ಎಂದು ಹೇಳುತ್ತಾರೆ. ಈ ರೀತಿ ಪಹಣಿಯಲ್ಲಿ ಸುಬ್ಬಣ್ಣನವರ ಹೆಸರು ಇದ್ದರೂ ಕೂಡ ಅವರ ಸೊಸೆ ಮುನಿತಾಯಮ್ಮನವರು ಎಲ್.ಆರ್.ಎಫ್. ನಲ್ಲಿ ಅರ್ಜಿ ಸಲ್ಲಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದಾರೆ ಎಂದರೆ ಸರಿಯಲ್ಲ. ದಿನಾಂಕಃ**27.03.1983** ರಿಂದ ಪ್ರತ್ಯೇಕವಾಗಿ ಸ್ವಾಧೀನ ಹೊಂದಿದ್ದೇನೆ ಎಂದು ಹೇಳಿದ್ದು, ಈ ಬಗ್ಗೆ ದಾಖಲೆ ಕೊಟ್ಟಿದ್ದೀರಾ? ಎಂದರೆ ಸಾಕ್ಷಿಯು **1983** ರಿಂದ ದಾಖಲೆಯನ್ನು ಕೊಟ್ಟಿಲ್ಲ ಆದರೆ ನನ್ನ ಮದುವೆಯಾದ ನಂತರ ಇದ್ದ ದಾಖಲೆಯನ್ನು ಕೊಟ್ಟಿದ್ದೇನೆ ಎಂದು ಹೇಳುತ್ತಾರೆ.

ಸುಬ್ಬಣ್ಣನವರು ಅಸಲು ದಾವಾ ಸಂಖ್ಯೆ:**140/92**ರಲ್ಲಿ ಸುಬ್ಬಣ್ಣನವರು ಸದಾಶಿವನ ಹೆಂಡತಿ ಮತ್ತು ಮಕ್ಕಳ ವಿರುದ್ಧ ಕೇಸ್ ಹಾಕಿದ್ದರು ಎಂದು ದಾಖಲೆ ಹಾಜರು ಪಡಿಸಿದ್ದೇನೆ ಎಂದರೆ ಗೊತ್ತಿಲ್ಲ. ಸದರಿ ದಾವೆಯ ಪ್ರಕಾರ ಸುಬ್ಬಣ್ಣನವರು

ಸರ್ವೆ ನಂ.39ರಲ್ಲಿ 6 ಎಕರೆ 15 ಗುಂಟೆ ಆಸ್ತಿಗೆ ಸಂಬಂಧಿಸಿದಂತೆ ಕರಾರು ಪತ್ರದ ಆಧಾರದ ಮೇಲೆ ನಿರ್ದಿಷ್ಟ ಪರಿಹಾರವನ್ನು ಕೇಳಿದ್ದರು ಎಂದರೆ ಗೊತ್ತಿಲ್ಲ. ಅವರು 6 ಎಕರೆ 15 ಗುಂಟೆಗೆ ದಾವೆ ಸಲ್ಲಿಸಿದ್ದರೂ ಕೂಡ ನಾನು 4 ಎಕರೆ 39 ಗುಂಟೆಗೆ ದಾವೆ ಸಲ್ಲಿಸಿ ಅವರಂತೆ ಆದೇಶವಾಗಿದೆ ಎಂದು ನನ್ನ ತಕರಾರಿನಲ್ಲಿ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ.

ಸುಬ್ಬಣ್ಣನವರು 2004ರಲ್ಲಿ ಮೃತಪಟ್ಟಿರಬಹುದು. ಸುಬ್ಬಣ್ಣನವರು ಮೃತಪಟ್ಟ ನಂತರ ಸದಾಶಿವನ ವಾರಸುದಾರರು ಅಫೀಲ್ ಸಲ್ಲಿಸಿದ್ದು ಅದರಲ್ಲಿ ನಾನು ಕೂಡ ಪಕ್ಷಗಾರಳಾಗಿದ್ದೇನೆ ಎಂದರೆ ಸರಿ. ಸದರಿ ಅಫೀಲ್ ವಜಾ ಆಗಿದೆ ಎಂದರೆ ಸರಿ. ಸದರಿ ಅಫೀಲ್ ವಜಾ ಆದ ನಂತರ ಸದಾಶಿವನವರ ವಾರಸುದಾರರು ನಮ್ಮ ವಿರುದ್ಧ ಮಾನ್ಯ ಉಚ್ಛನ್ಯಾಯಾಲಯದಲ್ಲಿ ಅಫೀಲ್ ನಡೆಸುತ್ತಿದ್ದಾರೆ ಎಂದರೆ ಸರಿ. ಸದರಿ ಪ್ರಕರಣ ಮಾನ್ಯ ಉಚ್ಛನ್ಯಾಯಾಲಯದಲ್ಲಿ ಬಾಕಿ ಇದ್ದರೂ ಕೂಡ ಸರ್ವೆ ನಂ. 39ರ ಪೂರ್ತಿ ವಿಸ್ತೀರ್ಣ ರಾಮಾಂಜನಪ್ಪನಿಗೆ ಸೇರಿದ್ದು ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಗೆ ಸಂಬಂಧಿಸಿದಂತೆ ಮುನಿತಾಯಮ್ಮ ಸಲ್ಲಿಸಿದ ಅರ್ಜಿಯ ಮೇಲೆ ಕೆ.ಎ.ಟಿ.ಯಲ್ಲಿ ಇನ್ನು ಅಫೀಲ್ ಬಾಕಿ ಇದೆ ಎಂದರೆ ಗೊತ್ತಿಲ್ಲ. ವಿಭಾಗ ಪತ್ರ ಆಧಾರದ ಮೇಲೆ ಇನ್ನು ಖಾತೆ ಆಗದೇ ಇರುವ ಕಾರಣ ವಾದಿಗಳಿಗೆ ದಾವಾ ಸ್ವತ್ತಿನಲ್ಲಿ ಅವರ ಭಾಗವನ್ನು ಪಡೆಯಲು ನಿಮಗೆ ಏನಾದರೂ ತೊಂದರೆ ಇದೆಯಾ ಎಂದರೆ ಇಲ್ಲ.

**<u>ಮರು ವಿಚಾರಣೆ ಇರುವುದಿಲ್ಲ</u>**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.